ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ|| 1887ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 116.

ಮೃತಪಟ್ಟ ದೊಡ್ಡಬಸಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ದೊಡ್ಡಪೇಟೆ ಕಾಯಿ ಅಂಗಡಿ ದೊಡ್ಡಬಸಂಣನ ಮಗ ಮುದ್ದಬಸಪ್ಪ ಮೃತಪಟ್ಟ ಸದರೀ ದೊಡ್ಡಬಸಂಣ ತಂದೆ ಆಗಬೇಕೆಂಬ ಹಕ್ಕುದಾರೀ ಮೇಲೆ ದೊಡ್ಡಪೇಟೆ ಸ್ಥಳದ ಮುದ್ದಬಸಪ್ಪನು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ದೊಡ್ಡಬಸಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್‌ಮಾಡಿ ಯಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುದ್ದಬಸಪ್ಪನವರ ಅರ್ಜೀಯನ್ನು 1887ನೇ ಇಸವಿ ಮಾರ್ಚ್ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡಬಸಂಣನವರೆ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಮಾರ್ಚ್ 7ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್, ಸಬ್ ಜಡ್ಜ್.

ಮೈಸೂರ ಗೆಜೆಟ್, ಚಂದಾ ದರ ವಗ್ಯೆರೇ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ಮೈಸೂರು ೀವಾ ಯಿ ಇತರ ಸ್ಥಳಗಳಿಗೆ. ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8

ಆಫೀಸ್ ಮಾಹೇ ಯಾ ಕ್ವಾರಟರಿಗೆ ದಾಮಾಷಾಯಿ ಪ್ರಕಾರ ದರಗಳು.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2 8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ ..	1 4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:-

ಮೊದಲನೇ ದಫಾ	5 0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2 8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟ್ಯೇ ವಗ್ಯೆರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ .. ಪುಟ 1ಕ್ಕೆ ..	10 0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ „ ..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಬ್ತಿ 1ಕ್ಕೆ ..	0 8
ಎರಡನೇ ದಫಾ	ಡಿಟೋ	ಡಿಟೋ ..	0 6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	..	..	0 4

ಷರಾ.—ಚಂದಾ ವಗ್ಯೆರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟ್ಯಾಗ ರೂಪಾಯಿಗೆ ಎಂದಾಣೆ ಯಂತೆ ಜಾಸ್ತಿ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಬಿಸೋಜೀಬ್ ಹುಕ್ಕುಂ,
ಟಿ. ಟಿ. ಲೆನರ್ಡ್,
ಮೈ. ಗೆ. ಕಂಪ್ಟ್ರೊಲರ್.

Mysore Government Press, Bangalore.—1887.